ಅವರ ಮನೆಯ ಮೂಲೆಯಲ್ಲಿದ್ದ ಬಣ್ಣಗೆಟ್ಟ ಹಳೆಯ ಟ್ರಂಕ್ ಒಂದರಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರ ಪ್ರಕಟಿಸಿದ ಹತ್ತು ಹನ್ನೆರಡು ಪುಟದ ಸಣ್ಣ ಸಣ್ಣ ಪುಸ್ತಕಗಳು ಇದ್ದವು. ಹಲವಾರು ಶೀರ್ಷಿಕೆಗಳಲ್ಲಿದ್ದ ಈ ಪುಸ್ತಕಗಳು ಅತ್ಯಂತ ಸರಳವಾಗಿ ಮತ್ತು ಸೂಕ್ತ ಚಿತ್ರಗಳೊಂದಿಗೆ ದಪ್ಪ ಅಕ್ಷರಗಳಲ್ಲಿ ಮುದ್ರಿತವಾಗಿರುತ್ತಿದ್ದವು. ಎರಡಾಣೆ ಮುಖಬೆಲೆಯ ಈ ಕಿರು ಪುಸ್ತಕಗಳ ಪ್ರತಿ ಪುಟದಲ್ಲೂ ಮುಖ್ಯವಾದ ವಿಚಾರಗಳ ಮೇಲೆ ನೀಲಿ ಶಾಹಿಯಿಂದ ಗೆರೆ ಎಳೆಯಲಾಗಿತ್ತು. ಇಲ್ಲೇ ನಾನು ಮೊದಲ ಬಾರಿಗೆ ಗಾಂಧಿಯನ್ನು ಸಂಧಿಸಿದ್ದು. ಗಾಂಧಿಯ ಸರಳತೆ ಮತ್ತು ಪ್ರಾಮಾಣಿಕತೆಯನ್ನು ಓದಿದ ನನಗೆ, ಪುಟ್ಟಸ್ವಾಮಾಚಾರ್ರು ಕೂಡ ನಮ್ಮೂರಿನ ಗಾಂಧಿಯಂತೆಯೇ ನನಗೆ ಕಂಡರು.

ಹೆಚ್ಚು ಮಾನವೀಯವೂ ಮತ್ತು ಪರಿಸರ ಸ್ನೇಹಿಯೂ ಆದ ಕಾಲ್ನಡಿಗೆಯೇ ಇವರ ಜೀವನ ಶೈಲಿಯ ಪ್ರಧಾನ ಭಾಗವಾಗಿತ್ತು. ಸರಳತೆಯನ್ನೇ ತಮ್ಮ ಜೀವಿತದ ಅವಿಭಾಜ್ಯ ಅಂಗವನ್ನಾಗಿ ಸ್ವೀಕರಿಸಿದ್ದ ಪುಟ್ಟಸ್ವಾಮಾಚಾರ್ರು, ಬದುಕಿನುದ್ದಕ್ಕೂ ತಮಗೆ ಅವಶ್ಯವಿಲ್ಲದ ಏನನ್ನೂ ತಮ್ಮ ಬಳಿ ಇಟ್ಟುಕೊಂಡಿರಲಿಲ್ಲ! ಸರಳತೆಯೆನ್ನುವುದು ಕೃಪಣತನವಲ್ಲ, ಅದೊಂದು ಬದುಕುವ ಕ್ರಮ ಎಂದು ನಂಬಿದ್ದರು. ನಮ್ಮ ಹಳ್ಳಿಯಿಂದ 15–20 ಕಿ.ಮೀ ಆಚೆಗೆ ತಮ್ಮ ಜಗತ್ತನ್ನು ಇವರು ವಿಸ್ತರಿಸಿಕೊಂಡಿರಲಿಲ್ಲ. ತಮ್ಮ ಆಯುಷ್ಯಪೂರ್ತಿ ನಮ್ಮ ಹಳ್ಳಿಯ ಪರಿಧಿಯಲ್ಲೇ ಕಳೆದರು. ನನ್ನ ಊರಿನ ನೆಲ ನೀರು, ಗಾಳಿ ಬೆಳಕು, ನೆರಳಿನಲ್ಲೇ ಕೊನೆಯವರೆಗೂ ಉಸಿರಾಡಿದರು. ನಾನು ಕಂಡಂತೆ ಅವರು, ಸಂತರಂತೆ ತಮ್ಮೊಳಗಿನ ಪ್ರಪಂಚವನ್ನು ಕಾಣಲು ತಮ್ಮ ಆಯುಷ್ಯವನ್ನೇ ಸವೆಸಿದರು. ಅಂತರಂಗದ ಪರಿವರ್ತನೆಯಂತೆಯೇ ಹೊರಗಿನ ನಡವಳಿಕೆಯೂ ಪರಿಶುದ್ಧವಾಗಿರುವುದೇ ನಿಜವಾದ ಬದುಕು ಎಂದು ಆಳವಾಗಿ ನಂಬಿದ್ದವರು.

ತಮ್ಮ ಬದುಕಿನಲ್ಲಿ ಯಾರ ಹಂಗಿಗೂ ಒಳಗಾಗದೆ, ಸತ್ಯವನ್ನು ಕಠೋರವಾಗಿ ಹೇಳುತ್ತಾ, ಸತ್ಯ ವಾಕ್ಯಕ್ಕೆ ತಪ್ಪಿ ನಡೆಯದಂತೆ ತಮ್ಮ ಬದುಕನ್ನು ಕಳೆದ ಭಾಗವತ ಪುಟ್ಟಸ್ವಾಮಾಚಾರರನ್ನು ಅಂದಿನ ಸಮಾಜದ ಕಣ್ಣುಗಳು ಸರಿಯಾಗಿ ಗುರುತಿಸಲಿಲ್ಲ ಎಂದು ನನಗೆ ಈಗ ಅನಿಸುತ್ತಿದೆ.


### ಜೆ.ವಿ. ಆನಂದಮೂರ್ತಿ

ಲೇಖಕರು ತುಮಕೂರಿನ ತಿಗಳರ ಗೊಲ್ಲಹಳ್ಳಿ, ಬೆಳ್ಳಾವಿ ಮಜರೆ ಗ್ರಾಮದವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂಎ ಪದವಿ, ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಜಾನಪದ ವಿದ್ಯಾರ್ಥಿ. 'ಪ್ರಜಾವಾಣಿ' ಕಥಾ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. 'ಪ್ರಜಾವಾಣಿ' ಮತ್ತು 'ಮಯೂರ' ಪತ್ರಿಕೆಗಳಲ್ಲಿ ಕತೆ ಮತ್ತು ಪ್ರಬಂಧಗಳು ಪ್ರಕಟಗೊಂಡಿವೆ. ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕ. 'ನೀರಗಂಧ', 'ಜಾಲಾರ ಹೂವು ಮತ್ತು ಇತರ ಪ್ರಬಂಧಗಳು', 'ಹೊಳೆ ಸಾಲು', 'ಹರಿವ ಹೊಳೆ' ಅವರ ಕೆಲವು ಪುಸ್ತಕಗಳಾಗಿವೆ.